"ಕಾಲವು ನಿಲ್ಲದು" ಎನ್ನುವೆಯೇನು?
**ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್**

ದುಡಿಯುವುದೊಂದೇ ನಿನ್ನಯ ಕರ್ಮ
ದುಡಿಸುವುದೊಂದೇ ನಮ್ಮಯ ಧರ್ಮ
ಇಂತಿರುವುದು ಕಲಿಯುಗದೀ ಧರ್ಮ
**ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್**

ನೆಯಲ್ಲಿ ಮಹತ್ವದ ಸಾಮಾಜಿಕ ಹೇಳಿಕೆಯನ್ನೂ ಮಾಡುವ ದಿನಕರ ದೇಸಾಯಿಯವರ ಈ ಪದ್ಯ ನನಗೆ ಪ್ರಿಯವಾಗಿರುವುದು ಅದರ ಅದ್ಭುತವಾದ ಕಲ್ಪನಾಶೀಲತೆಯಿಂದ. ಗಡಿಯಾರವನ್ನು ಗೆಳೆಯಾ ಎಂದು ಕವಿತೆ ಪರಿಭಾವಿಸುತ್ತದೆ. ದ್ವಾದಶ (ಹನ್ನೆರಡು) ನೇತ್ರ! ಆದರೆ ಅದಕ್ಕೆ ಎರಡೇ ಕೈಗಳು ಎಂಬ ವಿಸ್ಮಯ ಭಾವ ಮಕ್ಕಳ ಕಲ್ಪಕತೆಗೆ ಕಚಗುಳಿಯಿಡಬಲ್ಲುದು. 'ಕಾಲವು ನಿಲ್ಲದು ಎನ್ನುವೆಯೇನು' ಎಂಬ ಪ್ರಶ್ನೆ ಸಹಜವಾಗಿಯೇ ಗಡಿಯಾರವನ್ನೂ ಗಮನಿಸುತ್ತಾ ಗಮನಿಸುತ್ತಾ ಮನಸ್ಸಲ್ಲಿ ಮೂಡುವಂಥದ್ದು!



## ಹೂವಾಡಗಿತ್ತಿ: ಎಂ.ವಿ. ಸೀತಾರಾಮಯ್ಯ

ಹೂವನು ಮಾರುತ
ಹೂವಾಡಗಿತ್ತಿ
ಹಾಡುತ ಬರುತಿಹಳು;
ಘಮ ಘಮ ಹೂಗಳು
ಬೇಕೇ ಎನ್ನುತ
ಹಾಡುತ ಬರುತಿಹಳು

ಈ ಕವಿತೆಯನ್ನು ಮಕ್ಕಳು ರಾಗವಾಗಿ ಹಾಡಿದಲ್ಲಿ ಕವನ ಮತ್ತಷ್ಟು ಮೋಹಕವಾಗಬಲ್ಲುದು.

ಮಕ್ಕಳ ಸಾಹಿತ್ಯಕ್ಕಾಗಿಯೇ ತಮ್ಮ ಜೀವಿತವನ್ನು ಮುಡುಪಾಗಿಟ್ಟ ಹಿರಿಯ ಲೇಖಕರನ್ನು ನಾವು ಸ್ಮರಿಸಲೇಬೇಕು. ಪಳಕಳ ಸೀತಾರಾಮ ಭಟ್ಟರು ಅವರಲ್ಲಿ ಮುಖ್ಯರು. ಶಂ.ಗು. ಬಿರಾದಾರ, ಎ.ಕೆ. ರಾಮೇಶ್ವರ, ಸಿಸು ಸಂಗಮೇಶ, ಕಾಂಚ್ಯಾಣಿ ಶರಣಪ್ಪ ಮುಖ್ಯರಾದ ಉಳಿದ ಹಿರಿಯ ಲೇಖಕರು. ಮಕ್ಕಳ ಸಾಹಿತ್ಯದ ಬೀಳುಗಾಲದಲ್ಲಿ ಮಕ್ಕಳ ಸಾಹಿತ್ಯ ನಿರ್ಝರಿ ತೀರಾ ಬತ್ತಿ ಹೋಗದ ಹಾಗೆ ನೋಡಿಕೊಂಡವರು ಇಂಥ ಲೇಖಕರು.

1950ರ ನಂತರ ಮಕ್ಕಳ ಸಾಹಿತ್ಯದ ಬೆಳಸು ಕ್ಷೀಣಗೊಂಡಾಗ ಮಕ್ಕಳಿಗಾಗಿ ಅನೇಕ ಸೊಗಸಾದ ಪದ್ಯಗಳನ್ನು ಬರೆದವರು